ದಿ.16.02.2022ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣಬೋದಿಸಲಾಯ್ತು.

**ಮುಂದುವರಿದ ಪಾಟೀ ಸವಾಲುಃ 1 ಮತ್ತು 12ನೇ ಆರೋಪಿ ಪರ ಶ್ರೀ ಎಂಆರ್‌ರವರಿಂದ ಃ**

ನನ್ನ ತಮ್ಮ ನಾರಾಯಣಸ್ವಾಮಿರವರನ್ನು ಕೇಳಿಕೊಂಡು ನಮ್ಮ ಮನೆಗೆ ಬೇರೆಯವರು ಯಾರಾದರೂ ಬರುತ್ತಿದ್ದರು ಎಂದರೆ ಜ್ಞಾಪಕ ಇಲ್ಲ. ಆತ ರಿಯಲ್ ಎಸ್ಟೇಟ್ ಮಾಡುತ್ತಿದ್ದುದರಿಂದ ಜಮೀನು ಅಥವಾ ಸೈಟುಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಆಗಾಗ ಜನರು ಕೇಳಿಕೊಂಡು ಬರುತ್ತಿದ್ದರು ಎಂದರೆ ಜ್ಞಾಪಕ ಇರುವುದಿಲ್ಲ.

ಚಾಕು ಒಂದು ಕಡೆ ಚೂಪಾಗಿದ್ದು ಒಂದು ಕಡೆ ಮೊಂಡಾಗಿರುತ್ತದೆ ಎಂದರೆ ಒಂದು ಕಡೆ ಹಿಡಿ ಇರುತ್ತದೆ. ಚೂರಿ ಎರಡು ಕಡೆ ಹರಿತವಾಗಿರುತ್ತದೆ ಎಂದರೆ ಒಂದು ಕಡೆ ಅದಕ್ಕೂ ಹಿಡಿ ಇರುತ್ತದೆ. ಲಾಂಗ್ ಎಂದರೆ ಗೊತ್ತು ಸಾಕ್ಷಿ ತನ್ನ ಬಲಗೈಯನ್ನು ಎತ್ತಿ ಮೊಣಕೈವರೆಗೂ ತೋರಿಸಿ ಅಷ್ಟು ಉದ್ದ ಇರುತ್ತದೆ ಎಂದು ಹೇಳುತ್ತಾರೆ. ಅದನ್ನು ಹಿಡಿದುಕೊಳ್ಳಲು ಹಿಡಿಕೆ ಇರುತ್ತದೆ. ಮಚ್ಚು ಎಷ್ಟು ಉದ್ದ ಇರುತ್ತದೆ ಎಂದರೆ ಸಾಕ್ಷಿ ತನ್ನ ಬಲಗೈಯನ್ನು ಎತ್ತಿ ಮೊಣಕೈವರೆಗೂ ತೋರಿಸಿ ಅಷ್ಟು ಉದ್ದ ಇರುತ್ತದೆ ಎಂದು ಹೇಳುತ್ತಾರೆ. ಮಚ್ಚಿಗೆ ಎರಡೂ ಕಡೆ ಚೂಪಾಗಿರುತ್ತದೆ ಎಂದರೆ ಸರಿಯಲ್ಲ ಒಂದೇ ಕಡೆ ಚೂಪಾಗಿರುತ್ತದೆ ಮಚ್ಚು ಸೌದೆ ಕಟ್ ಮಾಡಲು ಬಳಸುತ್ತಾರೆ. ಮಚ್ಚಿನ ತುದಿ ಬೆಂಡಾಗಿರುತ್ತದೆ ಎಂದರೆ ಇರುತ್ತದೆ. ಈ ಪ್ರಕರಣದಲ್ಲಿ 4-5 ಮಚ್ಚುಗಳನ್ನು ಉಪಯೋಗಿಸಿರಬಹುದು ಜನ ಜಾಸ್ತಿ ಇದ್ದ ಕಾರಣ ನಿಖರವಾಗಿ ಹೇಳಲು ಸಾಧ್ಯವಿಲ್ಲ.

ಈ ಪ್ರಕರಣದಲ್ಲಿ ಎಷ್ಟು ಲಾಂಗ್‌ಗಳನ್ನು ಉಪಯೋಗಿಸಿದ್ದರು ಎಂದರೆ ಈಗ ಜ್ಞಾಪಕಕ್ಕೆ ಬರುತ್ತಿಲ್ಲ. ಈ ಪ್ರಕರಣದಲ್ಲಿ ಒಟ್ಟು ಆರು ದೊಣ್ಣೆಗಳನ್ನು ಉಪಯೋಗಿಸಿದ್ದರು. ದೊಣ್ಣೆಯ ಉದ್ದ ಕೇಳಿದಾಗ ಸಾಕ್ಷಿ ತನ್ನ ಕೈ ಮೇಲೆತ್ತಿ ಎದೆಯವರೆಗೆ ತೋರಿಸಿ ಅಷ್ಟು ಉದ್ದ ಇತ್ತು ಎಂದು ಹೇಳುತ್ತಾರೆ. ದೊಣ್ಣೆ ಸುಮಾರು 3 ಮೊಳ ಇದ್ದವಾ ಎಂದರೆ ನಾಲ್ಕು ಮೊಳ ಇರಬಹುದು. ಎಲ್ಲಾ ದೊಣ್ಣೆಗಳು ಒಂದೇ ಸೈಜ್‌ನಲ್ಲಿದ್ದವಾ ಎಂದು ಈಗ ಹೇಳಲು ಆಗುವುದಿಲ್ಲ. ಎಷ್ಟು ದೊಣ್ಣೆಗಳಿಗೆ ರಕ್ತವಾಗಿತ್ತು ಎಂದರೆ ಎಲ್ಲಾ ದೊಣ್ಣೆಗಳಿಗೆ ರಕ್ತವಾಗಿತ್ತು. ದೊಣ್ಣೆಗಳು ಪೂರ್ತಿ ರಕ್ತವಾಗಿರಲಿಲ್ಲ ಅರ್ಧ ಅರ್ಧ ರಕ್ತವಾಗಿದ್ದವು. ಎಲ್ಲಾ ಮಚ್ಚುಗಳು ರಕ್ತವಾಗಿದ್ದವು. ಮಚ್ಚಿನ ಮೊಂಡಾದ ಅಥವಾ ಹರಿತವಾದ ಭಾಗವಾಗದಲ್ಲಿ ರಕ್ತವಾಗಿತ್ತಾ ಎಂದರೆ ಹರಿತವಾದ ಭಾಗಕ್ಕೆ ರಕ್ತವಾಗಿತ್ತು. ಅವುಗಳ ಹಿಡಿಗಳವರೆಗೂ ರಕ್ತವಾಗಿರಲಿಲ್ಲ. ಎಲ್ಲಾ ಲಾಂಗುಗಳಿಗೂ ರಕ್ತ ಮೆತ್ತಿಕೊಂಡಿತ್ತು. ಪೂರ್ತಿ ಲಾಂಗ್ ಸಹ ರಕ್ತವಾಗಿತ್ತಾ ಎಂದರೆ ಆಗಿರಲಿಲ್ಲ.

ನನಗೆ ಚಾಕುವಿನಿಂದ ಹಲ್ಲೆಯಾಗಿತ್ತು. ನನಗೆ ಚಾಕುವಿನಿಂದ ತಿವಿದಿದ್ದರು. ಬಲವಾಗಿ ತಿವಿದಿದ್ದರಾ ಎಂದರೆ ತಿವಿದಿದ್ದರು. ಒಂದು ಸಾರಿ ಚಾಕುವಿನಿಂದ ಹಲ್ಲೆ ಮಾಡಿದ್ದರು. ಎದೆಗೆ ಬಿಟ್ಟರೆ ನನ್ನ ಬೆರಳುಗಳಿಗೂ ಗಾಯವಾಗಿತ್ತು. ಬೆರಳುಗಳಿಗೂ ಎಲ್ಲಾ ಶಕ್ತಿ ಉಪಯೋಗಿ ಹಲ್ಲೆ ಮಾಡಿದ್ದಾರೆ ಎಂದರೆ ಹೌದು. ಬೆರಳುಗಳಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ.

ಘಟನೆಯಾದ ದಿನ ಪೋಲಿಸರು ಎಷ್ಟು ಘಂಟೆಗೆ ಬಂದಿದ್ದರು ಎಂದರೆ ನಾನು ಆಸ್ಪತ್ರೆಗೆ ಹೋಗಿದ್ದೆನು. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಊರಿಗೆ ಹೋದಾಗ ಪೋಲಿಸರು, ಪೋಲಿಸ್ ವ್ಯಾನ್ ಇತ್ತು. ಪೋಲಿಸ್ ವಾಹನ ಸುಮಾರು 15-20

ಪೋಲಿಸರು ಸುಮಾರು ಒಂದು ತಿಂಗಳವರೆಗೂ ಇದ್ದರಾ ಎಂದರೆ ಮೂರು ತಿಂಗಳವರೆಗೂ ಇದ್ದರು. ಡಿವೈಎಸ್‌ಪಿರವರು ಸಹ ಮೂರು ತಿಂಗಳುಗಳ ಕಾಲ ನಿರಂತರವಾಗಿ ನಮ್ಮೂರಿನಲ್ಲಿದ್ದರು ಎಂದರೆ ಸರಿಯಲ್ಲ ಆಗಾಗ ಬಂದು ಹೋಗುತ್ತಿದ್ದರು ಆದರೆ ಅವರು ಡಿವೈಎಸ್‌ಪಿ ಕಛೇರಿಯಲ್ಲಿರುತ್ತಿದ್ದರು.

ಘಟನೆಯಲ್ಲಿ ಯಾವ ಆರೋಪಿಗಳಿಗೂ ಗಾಯವಾಗಿರುವುದಿಲ್ಲ. ಘಟನೆಯಲ್ಲಿ ಯಾವ ಆರೋಪಿಗಳ ಬಟ್ಟೆಗಳಿಗೂ ರಕ್ತವಾಗಿರಲಿಲ್ಲ ಎಂದರೆ ನೆನಪಿಲ್ಲ. ನಾನು ಖುದ್ದಾಗಿ ಡಿವೈಎಸ್‌ಪಿರವರನ್ನು ಭೇಟಿಯಾಗಿರಲಿಲ್ಲ ಎಂದರೆ ದೊಡ್ಡಬಳ್ಳಾಪುರದಲ್ಲಿ ಭೇಟಿಯಾಗಿದ್ದೇನೆ ಡಿವೈಎಸ್‌ಪಿರವರು ನಮ್ಮೂರಿಗೂ ಬಂದು ಹೋಗುತ್ತಿದ್ದರು.

ನನ್ನ ಜಾತಿ ಹಿಡಿದು ಬೈದಿದ್ದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯು ಟೈಫೈಡ್ ಜ್ವರದಿಂದ ದಿ:10.02.2010ರಿಂದ 16.02.2010ರವರೆಗೆ ಪೀಸ್ ಆಸ್ಪತ್ರೆ, ಬಾಗಲೂರಿನಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ ಆತ ಘಟನೆ ಸಮಯದಲ್ಲಿ ನಮ್ಮೂರಿಗೆ ಬಂದಿದ್ದರು. 11ರಿಂದ 14ನೇ ಆರೋಪಿಗಳು ಹೊಡೆಯಿರಿ ಎಂದು ಕುಮ್ಮಕ್ಕು ಕೊಡುತ್ತಿದ್ದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ.

ದಿ:12.02.2010ರಂದು 1ನೇ ಆರೋಪಿ ಮೋಟಾರ್ ಸೈಕಲ್ ಅನ್ನು ತೆಗೆದುಕೊಂಡು ನಮ್ಮೂರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಮೋಟಾರ್ ಸೈಕಲ್ ಅನ್ನು ನಮ್ಮ ಮನೆಯ ಬಳಿ ಬಿಟ್ಟು ಮೊಬೈಲ್‌ಅನ್ನು

ಬಿಸಾಕಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮೊಬೈಲ್ ಅನ್ನು ನಾನು ಎತ್ತಿಕೊಂಡು ಪೋಲಿಸರಿಗೆ ಕೊಟ್ಟಿರಲಿಲ್ಲ ಪೋಲಿಸರೇ ಜಪ್ತಿಪಡಿಸಿಕೊಂಡಿದ್ದಾರೆ. ಪೋಲಿಸರು ಸದರಿ ಮೊಬೈಲ್ ಅನ್ನು 2-3 ದಿನಗಳ ನಂತರ ತೆಗೆದುಕೊಂಡು ಹೋಗಿದ್ದರು ಖಚಿತವಾಗಿ ದಿನಾಂಕವನ್ನು ಹೇಳಲು ನನಗೆ ಜ್ಞಾಪಕ ಇಲ್ಲ. ಸದರಿ ಮೊಬೈಲ್ ಅನ್ನು ಪೋಲಿಸರು ತೆಗೆದುಕೊಂಡಾಗ ಯಾರ್‍ಯಾರು ಇದ್ದರು ಎಂದು ಹೇಳಲು ಈಗ ನೆನಪಿಲ್ಲ.

ಆರೋಪಿಗಳ ಕೈಯಲ್ಲಿ ಯಾರ್‍ಯಾರ ಕೈಯಲ್ಲಿ ಯಾವ ಯಾವ ಆಯುಧಗಳು ಇದ್ದವು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಗಾಯಗಳು ಆಗಿರಲಿಲ್ಲ ನಾನು ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

9ನೇ ಆರೋಪಿ ಯಾವಾಗಲೂ ನನ್ನ ತಮ್ಮ ನಾರಾಯಣಸ್ವಾಮಿಯನ್ನು ಕೇಳಿಕೊಂಡು ಬಂದಿರಲಿಲ್ಲ ಎಂದರೆ ಒಬ್ಬನೇ ಬಂದಿರಲಿಲ್ಲ ಇನ್ನೊಬ್ಬರೊಂದಿಗೆ ಬಂದಿದ್ದರು. ಘಟನೆಗಿಂತ ಮುಂಚೆ 9ನೇ ಆರೋಪಿ ನಮ್ಮ ಮನೆಯ ಬಳಿಗೆ ಬಂದಿರುವುದು ನನಗೆ ಈಗ ಜ್ಞಾಪಕ ಇಲ್ಲ. 9ನೇ ಆರೋಪಿ ಸಹ ರಿಯಲ್ ಎಸ್ಟೇಟ್ ಬ್ರೋಕರ್ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ನಾರಾಯಣಸ್ವಾಮಿ ಹಾಗೂ 9ನೇ ಆರೋಪಿ ಜೊತೆಯಾಗಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. 9ನೇ ಆರೋಪಿ ಹಾಗೂ ನನ್ನ ತಮ್ಮ ನಾರಾಯಣಸ್ವಾಮಿ ಜೊತೆಯಾಗಿಯೇ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದು ಸಾಕಷ್ಟು ಜನರಿಗೆ ಮೋಸ ಮಾಡುತ್ತಿದ್ದು 9ನೇ ಆರೋಪಿ ಕೇಬಲ್ ಕುಮಾರ್ ಹಾಗೂ

ನಾರಾಯಣಸ್ವಾಮಿ ಮೋಸ ಮಾಡಿದ್ದ ಎಲ್ಲಾ ಜನರು ಸೇರಿ ಈ ಘಟನೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಮ್ಮ ನಾರಾಯಣಸ್ವಾಮಿ ಬೆಂಗಳೂರಿನಲ್ಲಿ ಹೆಚ್ಚಿನ ಸೈಟ್ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ನಾರಾಯಣಸ್ವಾಮಿ ಬೆಂಗಳೂರಿನಲ್ಲಿ ಎಷ್ಟು ಜನ ವೈರಿಗಳು ಇದ್ದರು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನೀವು ಕೇಳುತ್ತಿರುವುದು ಸರಿಯಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ, 1 ಹಾಗೂ 12ನೇ ಆರೋಪಿ ಸ್ಥಳಕ್ಕೆ ಬಂದಿರಲಿಲ್ಲ, 1ನೇ ಆರೋಪಿ ನನ್ನ ಪತ್ನಿಯನ್ನು ಕೊಲೆ ಮಾಡಿರುವುದಿಲ್ಲ, 12ನೇ ಆರೋಪಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿ ಹಾಗೂ 9ನೇ ಆರೋಪಿ ಅಣ್ಣತಮ್ಮಂದಿರು ಎಂದರೆ ಗೊತ್ತಿಲ್ಲ. 1ನೇ ಆರೋಪಿ ಹಾಗೂ 9ನೇ ಆರೋಪಿಯನ್ನು ಸೇರಿಸುವುದು ಬೇಡ ಎಂದು ಎಲ್ಲಾ ಆರೋಪಿತರನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ ಪೋಲಿಸರು ಎಲ್ಲಾ ಆರೋಪಿಗಳನ್ನು ಸೇರಿಸಿದ್ದರು. 1ನೇ ಆರೋಪಿ ನಮ್ಮ ಸುತ್ತ ಮುತ್ತ ಹಳ್ಳಿಗಳಲ್ಲಿ ರಾಜಕೀಯ ಪ್ರಭಾವಿ ವ್ಯಕ್ತಿ ಎಂದರೆ ಗೊತ್ತಿಲ್ಲ. ನಾನು, ನನ್ನ ತಮ್ಮ ನಾರಾಯಣಸ್ವಾಮಿ ಹಾಗೂ ಸಾಕ್ಷಿದಾರರು ಎಲ್ಲರೂ ಒಂದು ಪಕ್ಷ, ಆರೋಪಿತರು ಬೇರೆ ಪಕ್ಷದಲ್ಲಿದ್ದರು ಎಂದರೆ ಪಕ್ಷ ಎಂದರೆ ಗೊತ್ತಿಲ್ಲ. ರಾಜಕಾರಣದ ದ್ವೇಷದಿಂದ ನಾನು ಹಾಗೂ ನನ್ನ ತಮ್ಮ ನಾರಾಯಣಸ್ವಾಮಿ ಮತ್ತು ಪೋಲಿಸರು ಸೇರಿಕೊಂಡು 1, 12 ಹಾಗೂ ಇತರೆ ಆರೋಪಿಗಳನ್ನು ಸುಳ್ಳಾಗಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯನ್ನು ನ್ಯಾಯಾಲಯದಲ್ಲಿ ಹೀಗೆಯೇ ಹೇಳಬೇಕೆಂದು ಸಾಕಷ್ಟು ಜನ ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

9ನೇ ಆರೋಪಿ ಹಾಗೂ ಆತನ ಸಹಚರರು ಘಟನೆ ಮಾಡಿದ್ದಾರೆ, ಉಳಿದ ಆರೋಪಿಗಳಿಗೂ ಈ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 10ನೇ ಆರೋಪಿ ಪರ ಶ್ರೀ ಕೆಎನ್ಆರ್‌ರವರಿಂದಃ**

ನನಗೆ ಶಾಲಾ ವಿದ್ಯಾಭ್ಯಾಸ ಇರುವುದಿಲ್ಲ ಆದರೆ ಸಹಿ ಮಾಡುತ್ತೇನೆ. ಯಾವುದೇ ಬರಹವನ್ನು ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನಾನು ತೋಟದ ಕೆಲಸ ಮಾಡುತ್ತೇನೆ, ಹಸುಗಳಿದ್ದವು ಹಾಲು ಹಾಕುತ್ತಿದ್ದೆ.

ಘಟನೆ ನಡೆದಾಗ ಚಾಸಾ-1 ಮತ್ತು ಚಾಸಾ-5 ನನ್ನೊಂದಿಗೆ ಮಾತನಾಡುತ್ತಾ ನಮ್ಮ ಮನೆಯ ಬಳಿ ಇರುವ ಆಲದ ಮರ ಬಳಿ ಇದ್ದರು. ಚಾಸಾ-1 ಮತ್ತು ಚಾಸಾ-5ರವರ ಮನೆ ಸ್ವಲ್ಪ ದೂರದಲ್ಲಿವೆ. ಚಾಸಾ-5 ಆ ದಿನ ಶಿವರಾತ್ರಿ ಇದ್ದುದರಿಂದ ಕೆಲಸಕ್ಕೆ ಹೋಗಿರಲಿಲ್ಲ. ನಾನು ವ್ಯವಸಾಯ ಮಾಡುವುದಿಲ್ಲ ನಾನು ನನ್ನ ಅಣ್ಣ ತಮ್ಮಂದಿರೂ ಸೇರಿ ಊರಿನಲ್ಲಿ ರೌಡಿಸಂ ಮಾಡುತ್ತೇವೆ ಎಂದರೆ ಸರಿಯಲ್ಲ.

ನನ್ನ ಮೇಲೆ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ನಾಲ್ಕು ಪ್ರಕರಣಗಳು ದಾಖಲಾಗಿವೆ ಎಂದರೆ ಜ್ಞಾಪಕ ಇಲ್ಲ. ಕ್ರೈಂ 15-2010ರಲ್ಲಿ ನನ್ನ, ನನ್ನ ತಮ್ಮ ನಾರಾಯಣಸ್ವಾಮಿ ಹಾಗೂ ಇತರರ ಮೇಲೆ ಕಲಂ 323, 324, 504, ಸವಾ ಕಲಂ 34ರ ಅಡಿಯಲ್ಲಿ ದೂರು ನೀಡಿದ್ದು ನಾನು 2ನೇ ಆರೋಪಿಯಾಗಿದ್ದು ವೆಂಕಟೇಶ ಅನ್ನುವವರು ದೂರು ನೀಡಿದ್ದರು ಎಂದರೆ ಗೊತ್ತಿಲ್ಲ. 2009ರಲ್ಲಿ ಮುನಿಶಾಮಪ್ಪ ಅನ್ನುವವರು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಕ್ರೈಂ ನಂ. 28-2009ರಲ್ಲಿ ಕಲಂ

447, 427ರಂತೆ ದೂರು ನೀಡಿದ್ದು ನಾನು 5ನೇ ಆರೋಪಿಯಾಗಿದ್ದೇನೆ ಎಂದರೆ ಯಾವ ಮುನಿಶಾಮಪ್ಪ ಗೊತ್ತಿಲ್ಲ ಅದರಲ್ಲಿ ದೋ.ಪಟ್ಟಿ ಸಲ್ಲಿಸಲಾಗಿದೆ ಎಂದರೆ ಗೊತ್ತಿಲ್ಲ. 2009-10ರಲ್ಲಿ ವಿಶ್ವನಾಥಪುರ ಪೋಲಿಸ್ ಠಾಣೆಯ ಪಿಐರವರು ಎಂಎಜಿಸಿಆರ್ 143-2009-10ರಲ್ಲಿ ಕಲಂ 107ರಂತೆ ದೊಡ್ಡಬಳ್ಳಾಪುರದ ತಹಶೀಲ್ದಾರ್‌ರವರ ಮುಂದೆ ಪ್ರಕರಣ ದಾಖಲಿಸಿದ್ದು ನಾನು 2ನೇ ಆರೋಪಿಯಾಗಿದ್ದೇನೆ ಎಂದರೆ ಗೊತ್ತಿಲ್ಲ. ಇದೇ ರೀತಿ ಸುಮಾರು ಪ್ರಕರಣಗಳು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ದ ನಮೂದಾಗಿವೆ ಎಂದರೆ ಗೊತ್ತಿಲ್ಲ.

ಮುಖ್ಯ ವಿಚಾರಣೆಯಲ್ಲಿ ಟ್ರೇಲರ್ ಬಗ್ಗೆ ಹೇಳಿದ್ದು ಸದರಿ ಟ್ರೇಲರ್ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ಘಟನೆ ಸಮಯದಲ್ಲಿ ಯಾವುದೇ ಟ್ರೇಲರ್ ಇರಲಿಲ್ಲ ನಾನು ಸಹ ಘಟನೆ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಘಟನೆ ವೇಳೆ ಯಾರ್‍ಯಾರು ಯಾವ ಯಾವ ಬಟ್ಟೆ ಧರಿಸಿದ್ದರು ಎಂದು ಈಗ ನನಗೆ ಹೇಳಲು ಆಗುವುದಿಲ್ಲ ಪೋಲಿಸರಿಗೆ ಹೇಳಿದ್ದೇನೆ. ಆರೋಪಿತರು ಯಾರ್‍ಯಾರು ಯಾವ ಅಸ್ತ್ರಗಳನ್ನು ಹಿಡಿದಿದ್ದರು ಎಂದು ಈಗ ಹೇಳಲು ಜ್ಞಾಪಕ ಇರುವುದಿಲ್ಲ ಈ ಮುಂಚೆ ಹೇಳಿದ್ದೇನೆ. ಆರೋಪಿತರು ಬಂದಿದ್ದ ಬೈಕ್ ಗಳ ವಾಹನ ಸಂಖ್ಯೆ, ಕಂಪನಿಯ ಹೆಸರು, ಕಲರ್ ಹೇಳಲು ಆಗುತ್ತದೆಯೇ ಎಂದರೆ ನನಗೆ ಈಗ ಹೇಳಲು ಆಗುವುದಿಲ್ಲ ನಾನು ಓದಿರುವುದಿಲ್ಲ. ಆರೋಪಿತರು ಬಂದಿದ್ದ ಕಾರ್‌ಗಳ ವಾಹನ ಸಂಖ್ಯೆ, ಕಂಪನಿಯ ಹೆಸರು, ಕಲರ್ ಹೇಳಲು ಆಗುತ್ತದೆಯೇ ಎಂದರೆ ನನಗೆ ಈಗ ಹೇಳಲು ಆಗುವುದಿಲ್ಲ ಆಗ ಜನ ಜಾಸ್ತಿ ಇದ್ದರು. 4 ಬೈಕ್ ಎರಡು ಕಾರ್‌ಗಳನ್ನು ಯಾರ್‍ಯಾರು ಚಲಾಯಿಸಿಕೊಂಡು ಬಂದಿದ್ದರು ಎಂದರೆ ಬಂದಿದ್ದರು ಆದರೆ ಯಾರೂ ಚಲಾಯಿಸಿಕೊಂಡು ಬಂದಿದ್ದರು ಹೇಳಲು ಆಗುವುದಿಲ್ಲ.

2 ಮತ್ತು 10ನೇ ಆರೋಪಿಗಳು ನನಗೆ ಘಟನೆಗಿಂತ ಮುಂಚೆ ಪರಿಚಯ ಇರಲಿಲ್ಲ ಎಂದರೆ ಸರಿ. 10ನೇ ಆರೋಪಿ ಹೊಡೆದ ದೊಣ್ಣೆಯ ಉದ್ದ, ದಪ್ಪ, ಕಟ್ಟಿಗೆಯ ಜಾತಿ ಹೇಳಲು ಆಗುತ್ತದೆಯೇ ಎಂದರೆ ನೀಲಗಿರಿ ದೊಣ್ಣೆ ಇತ್ತು, ಸುಮಾರು ನಾಲ್ಕು ಅಡಿ ಉದ್ದ, ಒಂದೂವರೆ ಇಂಚು ದಪ್ಪ ಇರಬಹುದು.

ನನಗೆ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ಗೊತ್ತಿಲ್ಲ. ನಾನು ಠಾಣೆಗೆ ಹೋಗಲು ಪೋಲಿಸರು ನೋಟಿಸ್ ನೀಡಿರಲಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದರಾ ಎಂದರೆ ಪಿಎಸ್ಐರವರ ಮುಂದೆ ಹೇಳಿದ್ದೇನೆ. ನಮ್ಮ ಮನೆಯಲ್ಲಿ ಮಚ್ಚು ಇವೆ, ಚಾಕು ಇರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳು ನಮ್ಮ ಮನೆಯದ್ದಲ್ಲ.

ಚಾಸಾ-1 ಹಾಗೂ ನಾರಾಯಣಸ್ವಾಮಿಗೆ 2 ಮತ್ತು 10ನೇ ಆರೋಪಿಗಳು ಬಂದಿದ್ದರು ಎಂದು ಹೇಳಿದ್ದೇನೆ. ನಾನು ಆಸ್ಪತ್ರೆಗೆ ಹೋಗುವಾಗ ಹಾಗೂ ಠಾಣೆಗೆ ಹೋಗುವಾಗ ಚಾಸಾ-1, ಚಾಸಾ-4 ನನ್ನ ತಮ್ಮ ನಾರಾಯಣಸ್ವಾಮಿ ಜೊತೆಯಲ್ಲಿದ್ದೆವು ಎಂದರೆ ಆಸ್ಪತ್ರೆಯಲ್ಲಿ ಇದ್ದೆವು.

9 ವರ್ಷದ ಹಿಂದೆ ಶಿವರಾತ್ರಿ ಹಬ್ಬದ ದಿನ ನಾನು, ಚಾಸಾ-1 ಮತ್ತು ಚಾಸಾ-5 ನನ್ನ ಮನೆಯ ಬಳಿ ಇದ್ದಾಗ 1ನೇ ಆರೋಪಿ ಮತ್ತು ಮೃತ 9ನೇ ಆರೋಪಿ ಮುನಿಕುಮಾರ ನಮ್ಮ ಮನೆಯ ಬಳಿ ಬೈಕ್‌ನಲ್ಲಿ ಬೆಳಗ್ಗೆ 7ರಿಂದ 8.00 ಗಂಟೆ ಸಮಯದಲ್ಲಿ ಬಂದಿದ್ದು ನನ್ನ ತಮ್ಮ ನಾರಾಯಣಸ್ವಾಮಿರವರನ್ನು ಕೇಳಿದ್ದರು ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

1 ಮತ್ತು ಮೃತ 9ನೇ ಆರೋಪಿಗಳಿಬ್ಬರೂ ನನ್ನ ತಮ್ಮನನ್ನು ಇಟ್ಟಿಗೆ ಹಣ ಕೇಳಿದ್ದರು, ನನ್ನ ತಮ್ಮ ನಾರಾಯಣಸ್ವಾಮಿ, ಈ ದಿನ ಶಿವರಾತ್ರಿ, ಹಣ ಇಲ್ಲ ಸೋಮವಾರ ಕೊಡುತ್ತೇನೆ ಎಂದು ಹೇಳಿದ್ದರು ನನ್ನ ತಮ್ಮ ಈ ದಿನ ರಜೆ, ಹಣ ಇಲ್ಲ ಚೆಕ್ ಬೇಕಾದರೆ ಬರೆದುಕೊಡುತ್ತೇನೆ ಎಂದು ಹೇಳಿದ್ದರು ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಾನು, ಚಾಸಾ-1, ಚಾಸಾ-5 ಮತ್ತು ಮೃತ ದೇವರಾಜ, ಮೃತ ದೊಡ್ಡ ಚಿನ್ನಪ್ಪ, ಮೃತ ಗಾಯಿತ್ರಮ್ಮ ಮಾತನಾಡುತ್ತಾ ಕುಳಿತಿದ್ದೆವು ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಹತ್ತನೇ ಆರೋಪಿ ಮಂಜುನಾಥ ನಾರಾಯಣಸ್ವಾಮಿಯ ಕೆನ್ನೆಗೆ ಹೊಡೆದು ವಡ್ಡನಕೇಯಾ ನಿಮ್ಮ ಜಾತಿ ಸರಿ ಇಲ್ಲ ಎಂದು ಬಯ್ದಿದ್ದರು, 10ನೇ ಆರೋಪಿ ಮಂಜುನಾಥ ಒಕ್ಕಲಿಗ ಜಾತಿಗೆ ಸೇರಿದವರು ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 10ನೇ ಆರೋಪಿ ಮಂಜುನಾಥ ನನ್ನ ಪತ್ನಿಗೆ ದೊಣ್ಣೆಯಿಂದ ಹೊಡೆದಿದ್ದರು ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ನಾಗೇಶ ಚಾಕುವಿನಿಂದ ದೊಡ್ಡಚಿನ್ನಪ್ಪರವರಿಗೆ ತಿವಿದಿದ್ದ ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-3 ಮಂಜುನಾಥ ಆಗ ಸ್ಥಳಕ್ಕೆ ಬಂದಿದ್ದರು, ನಾಗೇಶ ಗೌಡ ಮತ್ತು ಗೋವಿಂದರಾಜು ಬೈಕ್‌ನಲ್ಲಿ ಹೋಗುತ್ತಿದ್ದರು ಆಗ ಚಾಸಾ-3 ಬೈಕ್‌ಅನ್ನು ತಳ್ಳಿದ್ದರು ಎಂದು ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

2 ಮತ್ತು 10ನೇ ಆರೋಪಿತರು ಬೊಮ್ಮವಾರದವರು ಎಂದರೆ ಸರಿ. ಘಟನೆ ನಡೆದಾಗ ರಾಮಮೂರ್ತಿ ಅನ್ನುವವರು ಪಂಚಾಯ್ತಿಯ ಛೇರ್ಮನ್ಆಗಿದ್ದರು ಎಂದರೆ ಗೊತ್ತಿಲ್ಲ. ರಾಮಮೂರ್ತಿ ಹಾಗೂ ನನ್ನ ತಮ್ಮ ಚಾಸಾ-4 ಸ್ನೇಹಿತರು ಎಂದರೆ ಗೊತ್ತಿಲ್ಲ. ರಾಮಮೂರ್ತಿ, 2 ಮತ್ತು 10ನೇ ಆರೋಪಿತರಿಗೆ ಆಗುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ನಾನು, ಚಾಸಾ-4 ಸೇರಿ 2 ಮತ್ತು 10ನೇ ಆರೋಪಿತರನ್ನು ಸುಳ್ಳಾಗಿ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. 2 ಮತ್ತು 10ನೇ ಆರೋಪಿತರು ಘಟನೆಯ ದಿನ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 2 ಮತ್ತು 10ನೇ ಆರೋಪಿತರ ಬೈಕ್ ಹಾಗೂ ಕಾರ್ ಇರುವುದಿಲ್ಲ ಆದ್ದರಿಂದ ಬಂದಿರಲಿಲ್ಲ ಎಂದರೆ ಬಂದಿದ್ದರು.

2 ಮತ್ತು 10ನೇ ಆರೋಪಿತರು ಯಾವುದೇ ಚಾಕು ಉಪಯೋಗಿಸಿರಲಿಲ್ಲ ನನ್ನ ಮನೆಯಲ್ಲಿ ಇದ್ದ ಕೋಳಿ ಕುಯ್ಯುವ ಚಾಕುವನ್ನು ಪೋಲಿಸರಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ರಾಮಮೂರ್ತಿ, ಚಾಸಾ-4 ಹಾಗೂ ನಾನು ಸೇರಿಕೊಂಡು ಸುಮಾರು ದಿನಗಳು ಸಂಚು ನಡೆಸಿ ಘಟನೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ ಮೂರು ಬಾರಿ ಹೋಗಿದ್ದೇನೆ. ಮೊದಲನೇ ಸಾರಿ ಡಿವೈಎಸ್ಪಿ, 2ನೇ ಸಾರಿ ಡಿವೈಎಸ್ಪಿ, 3ನೇ ಸಾರಿ ಪಿಎಸ್ಐರವರನ್ನು ಭೇಟಿಯಾಗಿದ್ದೆನು. ನಾನು ಠಾಣೆಗೆ ಹೋಗಿರಲಿಲ್ಲ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬರುವ ಮುಂಚೆ ಚಾಸಾ-4 ಮತ್ತು ಪೋಲಿಸರು ಹೇಳಿಕೊಟ್ಟಂತೆ ತಯಾರಿ ಮಾಡಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3, 11, 13 ಮತ್ತು 14ನೇ ಆರೋಪಿಗಳು ಹಾಜರಿದ್ದು ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಮಧ್ಯಾಹ್ನದ ಅವಧಿಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ದಿ.16.02.2022ರಂದು ಸಾಕ್ಷಿಯನ್ನು ಮಧ್ಯಾಹ್ನದ ಅವಧಿಯಲ್ಲಿ ಮತ್ತೆ ಕರೆಸಿ ಪ್ರಮಾಣಬೋದಿಸಲಾಯ್ತು.

**ಪಾಟೀ ಸವಾಲುಃ 3, 7, 11, 13 ಮತ್ತು 14 ನೇ ಆರೋಪಿತರ ಪರ ಶ್ರೀ ಕೆಜೆಜಿರವರಿಂದಃ**

ನಾನು ದ್ಯಾವರಹಳ್ಳಿಯಲ್ಲಿ ಹುಟ್ಟಿದ್ದು ಅದೇ ಊರಿನಲ್ಲಿಯೇ ಇವತ್ತಿನವರೆಗೂ ವಾಸವಾಗಿದ್ದೇನೆ. ನಮ್ಮೂರಿನಲ್ಲಿ ಸುಮಾರು 80ರಿಂದ 90 ಮನೆಗಳು ಇವೆ. ಊರಿನಲ್ಲಿ ಇರುವವರು ನನಗೆ ಗೊತ್ತು. ಎಲ್ಲಾ ಆರೋಪಿಗಳು ನಮ್ಮ ಊರಿನವರಲ್ಲ. ಘಟನೆಗಿಂತ ಮುಂಚೆ ಆರೋಪಿತರ ಪರಿಚಯ ನನಗೆ ಇರಲಿಲ್ಲ. 3, 7, 11, 13 ಮತ್ತು 14ನೇ ಆರೋಪಿಗಳ ಹೆಸರು, ಮುಖಚರ್ಯೆ, ಬಟ್ಟೆಗಳ ಬಣ್ಣ ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಬಂದಿದ್ದವರಲ್ಲಿ ಎಷ್ಟು ಜನ ಉದ್ದದವರು, ಕೆಂಪು ಬಣ್ಣದವರು, ಕಪ್ಪು ಬಣ್ಣದವರು, ದಪ್ಪ ಇದ್ದವರು, ಕುಳ್ಳಗಿದ್ದವರು ಎನ್ನುವ ಬಗ್ಗೆ ಪೋಲಿಸರಿಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ.

ಯಾವ ಆರೋಪಿಗಳು ಯಾವ ಕೃತ್ಯ ಮಾಡಿದ್ದಾರೆ ಎಂದು ನಾನು ನಿಖರವಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 3ನೇ ಆರೋಪಿ ಗುಪ್ತಾಂಗಕ್ಕೆ ಒದ್ದಿದ್ದನು ಎಂದು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ. 7ನೇ ಆರೋಪಿ ದೊಣ್ಣೆಯಿಂದ ನನ್ನ ಕೈ ಬೆರಳುಗಳಿಗೆ ಹೊಡೆದಿದ್ದನು ಎಂದು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ. 11, 13 ಮತ್ತು 14ರವರು ವಡ್ಡಜಾತಿಯವರನ್ನು ಹೊಡೆಯಿರಿ ಎಂದು ಪ್ರಚೋದನೆ ನೀಡುತ್ತಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಆರೋಪಿತರನ್ನು ಬಂಧಿಸಿ ನ್ಯಾಯಾಲಯದ ಮುಂದೆ ನಿಲ್ಲಿಸಿದ್ದರಿಂದ ಅವರೇ ಘಟನೆಯನ್ನು ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ನಾರಾಯಣಸ್ವಾಮಿರವರ ಮಾತು ಕೇಳಿ 3, 7, 11, 13 ಮತ್ತು 14ನೇ ಆರೋಪಿಗಳ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಗಿಂತ ಮುಂಚೆ 3, 7, 11, 13 ಮತ್ತು 14ನೇ ಆರೋಪಿಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೂ 3, 7, 11, 13 ಮತ್ತು 14ನೇ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ನನ್ನ ತಮ್ಮ ನಾರಾಯಣಸ್ವಾಮಿರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು, ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡುವಾಗ ಘಟನೆಯ ಸಮಯದಲ್ಲಿ ಮನೆಯಲ್ಲಿ ಯಾರ್‍ಯಾರು ಇರುತ್ತಾರೆ ಎಂದು ಸಾಕ್ಷಿಗೆ ಪ್ರಶ್ನಿಸಿದಾಗ ತಾನು, ತನ್ನ ಮಗ ಹಾಗೂ ತನ್ನ ಪತ್ನಿ ಮನೆಯಲ್ಲಿ ಇದ್ದುದು ಎಂದು ಹೇಳಿದ್ದು ಮಗನ ವಯಸ್ಸು ಎಷ್ಟು ಎಂದು ಸಾಕ್ಷಿಗೆ ಕೇಳುವುದು ಅನಿವಾರ್ಯ ಇದೆ ಏಕೆಂದರೆ ಆತನ ಮಗನ ವಯಸ್ಸು ಆಗ ಎರಡೂವರೆ ವರ್ಷ ಇದೆ ಎಂದು ಹೇಳಿದ್ದು

ದೊ.ಪಟ್ಟಿಯಲ್ಲಿ ಸಾಕ್ಷಿಯ ಮಗನ ಹೇಳಿಕೆ ದಾಖಲಾಗಿರುವುದಿಲ್ಲ ಹೇಳಿಕೆ ಏಕೆ ದಾಖಲಾಗಿರುವುದಿಲ್ಲ ಎಂದು ತನಿಖಾಧಿಕಾರಿಯನ್ನು ಪ್ರಶ್ನಿಸಿದಾಗ ಯಾವುದೇ ದ್ವಂದ್ವ ಮೂಡಿಬರುವುದಿಲ್ಲವಾದ್ದರಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರ ಮನವಿಯನ್ನು ತಿರಸ್ಕರಿಸಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.